ವೈದ್ಯಕೀಯ ಚಿಕಿತ್ಸಾಲಯಗಳ ದುರಸ್ಥಿ

2002 - ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುವ ನೆಲಮಂಗಲ ವಿಧಾನಸಬಾಕ್ಷೇತ್ರದಲ್ಲಿ ವೈದ್ಯಕೀಯ ಚಿಕಿತ್ಸಾಲಯಗಳು ಯಾವ ಸೌಲಭ್ಯಗಳು ರೋಗಿಗಳಿಗೆ ದೊರಕದೆ ದುಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅದರಲ್ಲೂ ಮುಖ್ಯವಾಗಿ ಮದುರೆ ಹೋಬಳಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ಹಲೇನಹಳ್ಳಿ ಕಾಡನೂರು, ಈ ಗ್ರಾಮಗಳಲ್ಲಿರುವ ಆಸ್ಪತ್ರೆಗಳಿಗೆ ವೈದ್ಯರು ಸರಿಯಾಗಿ ಹಾಜರಾಗದೆ ಸರಿಯಾದ ಔಷಧೋಪಚಾರ ರೋಗಿಗಳಿಗೆ ನೀಡದೆ ನಿರ್ಲಕ್ಷತನದಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಅಂತಹ ವೈದ್ಯರುಗಳ ಮೇಲೆ ಸರ್ಕಾರದವರು ಕ್ರಮ ಕೈಗೊಂಡು ರೋಗಿಗಳ ಹಿತದೃಷ್ಟಿಯನ್ನು ಕಾಪಾಡುವರೇ?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಹೌದು

ಇ) ತಪ್ಪಿತಸ್ಥ ವೈದ್ಯರುಗಳ ಮೈಲೆ ಕ್ರಮ ಕೈಗೊಂಡು ರೋಗಿಗಳ ಹಿತದೃಷ್ಟಿಯನ್ನು ಕಾಪಾಡಲಾಗುವುದು.

ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿಗೆ ಬೋರ್ಡ್ ಆಫ್ ವಿಸಿಟರ್ಸ್ ನೇಮಕ

2006 - ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿಯ ಕೆ.ಎಂ.ಸಿ.ಆಸ್ಪತ್ರೆಯಲ್ಲಿ ಬೋರ್ಡ್ ಆಫ್ ವಿಸಿಟರ್ (ಸಂದರ್ಶಕ ಮಂಡಳಿ) ರಚಿಸಲಾಗಿದೆಯೇ?*

ಆ) *ಇಲ್ಲದಿದ್ದಲ್ಲಿ ಇದನ್ನು ಎಂದಿನಿಂದ ರಚಿಸಲಾಗುವುದು?*

ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಶೀಘ್ರದಲ್ಲಿಯೇ, ರಚಿಸಲಾಗುವುದು.

ಮೈಸೂರು ಮಿನಿರಲ್ಸ್‌ಗೆ ನೀಡಲಾದ ಹಣ

2013 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಗಣಿ ಮತ್ತು ಭೂವಿವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು ಮಿನಿರಲ್ಸ್ ಕಂಪನಿ ಎಂದಿನಿಂದ ಪ್ರಾರಂಭವಾಯಿತು ಹಾಗೂ ಈ ಕಂಪೆನಿಯನ್ನು ಯಾವ ಉದ್ದೇಶದಿಂದ ಪ್ರಾರಂಭಿಸಲಾಯಿತು?

2) ಇದಕ್ಕಾಗಿ ಸರ್ಕಾರದಿಂದ ನೀಡಲಾದ ಹಣವೆಷ್ಟು?

3) ಇದುವರೆವಿಗೆ ಈ ಸಂಸ್ಥೆ ಮಾಡಿರುವ ಲಾಭ ನಷ್ಟ ಎಷ್ಟು?

ಶ್ರೀ ಎಂ.ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು).

1) ಹಿಂದಿನ ಬೋರ್ಡ್ ಆಫ್ ಮಿನಿರಲ್ಸ್ ಡೆವಲೆಪ್‌ಮೆಂಟ್ ವ್ಯವಹಾರಗಳನ್ನು ವಹಿಸಿಕೊಳ್ಳುವ ಉದ್ದೇಶದಿಂದ ಹಾಗೂ ಕರ್ನಾಟಕ ರಾಜ್ಯದಲ್ಲಿನ ಖನಿಜ ಸಂಪತ್ತನ್ನು ಕ್ರಮಬದ್ಧವಾಗಿ ಮತ್ತು ಯೋಜಿತ ರೀತಿಯಲ್ಲಿ ಅಭಿವೃದ್ಧಿಗೊಳಿಸುವ ಸಲುವಾಗಿ